ಹೇಳಿ, ಜೀವದ ಗೆಳೆಯನನ್ನು ಬಹಳ ದಿನಕ್ಕೆ ನೋಡಿದ್ದ ಮಂಜಪ್ಪ ಮಂದಸ್ಮಿತನಾದ.

'ಬಾ ಮರಿಯಾ, ಆರಾಮ...' ಎಂದು ಕುಳಿತಲ್ಲಿಂದ ಎದ್ದು ಮರಿಯಪ್ಪನ ಎರಡು ಕೈಹಿಡಿದುಕೊಂಡು ಹೊರಸಿನ ಮೇಲೆ ಪಕ್ಕಕ್ಕೆ ಕುಳ್ಳಿರಿಸಿಕೊಂಡ. ಮರಿಯಪ್ಪ 'ಬೇಸ್ಯದಿನಲ್ಲೊ' ಎಂದು ಮೆಲ್ಲನೆ ಮುಗುಳುನಗೆ ಬೀರಿದ. ಅಷ್ಟರಲ್ಲಿ ಆಳು ಒಬ್ಬ ನೀರು ತಂದು ಕೊಟ್ಟ. ಮರಿಯಪ್ಪ ಎದ್ದು ಎರಡು ಹೆಜ್ಜೆ ಆ ಕಡೆ ಸಾಗಿ ಮುಖದ ಮೇಲೆ ಚಿಮುಕಿಸಿಕೊಂಡು, ಕೈತೊಳೆದುಕೊಂಡು ಬಂದು ಮತ್ತೆ ಹೊರಸಿಗೆ ಕುಳಿತು, ಎರಡೂ ಕೈಗಳಿಂದ ಚರಿಗೆ ಎತ್ತಿ ನೀರು ಗುಟುಕರಿಸಿ, ಗೆಳೆಯನ ಹಸಿರುಟ್ಟ ಭೂಮ್ತಾಯಿಯ ಕಂಡು, 'ಬಾಳ್ ಚೊಲೋ ಐತಪಾ ಪೀಕು' ಎಂದು ಚರಿಗೆ ಕೆಳಗಿಟ್ಟ. 'ಹೌದ್ ಮರಿಯಾ, ಬಂದ ನೌಕರಿ ಕೈಬುಟ್ಟು ಹಿರ‍್ಯಾರು ಬುಟ್ಟು ಹ್ವಾದ ಭೂಮ್ಯಾಗ ಬೀಜ ತುಂಬಿಕ್ಯಂತ ಬೆಳಿ ತಕ್ಕಂತ ಬದಕ ನೆಡಿಸ್ಕ್ಯಂತಾ ಹೊಂಟೇನೋಡು' ಎಂದು ಒಂದಿಷ್ಟು ಎದೆ ಉಬ್ಬಿಸಿ ಹೆಮ್ಮೆಯಿಂದ ಹೇಳಿದ ಮಂಜಪ್ಪ. ಮರಿಯಪ್ಪ, 'ಬಾಳ ಕುಸಿಯಾತಪಾ' ಎಂದು ಗೆಳೆಯನ ಸಂತೋಷದಿಂದ ತುಂಬಿದ ತೃಪ್ತಿಕರ ಬದುಕನ್ನು ಮನದಲ್ಲಿ ಹಾರೈಸಿ, ತನ್ನ ಪಡಿಪಾಟಲು ನೆನೆಸಿಕೊಂಡು ಮುಖ ಸಣ್ಣದು ಮಾಡಿದ.

ಗೆಳೆಯ ಮಂಜಪ್ಪ ಮರಿಯಪ್ಪನ ಬಾಡಿದ ಮುಖ ಚಹರೆ ಕಂಡು ಏನೆಂದು ಅರಿತುಕೊಂಡು, ಮರಿಯಪ್ಪನ ಭುಜದ ಮೇಲೆ ಕೈಹಾಕಿ, 'ಮರ‍್ಯಾ, ನಿನ್ನ ಕಷ್ಟಾ ಏನೆಂಬುದು ನಂಗೊತ್ತೈತಿ... ನೀನೇನು ತೆಲಿಗೆ ತೊಗಬ್ಯಾಡ. ನಿನ್ನೆ ಕರಿಯನತಾಗ ಎಲ್ಲಾ ವಿಚಾರ್ಸಿಕೊಂಡ ಬಂದೀನಿ. ಇನ್ನ ನಾಲ್ಕು ದಿನದಾಕ ಹೊಲ ಬಿತ್ತುವಂತಿ... ಅವನೌವನ್, ನಾನ್ ರೊಕ್ಕಾ ಕೊಡ್ತೀನಿ... ನೀ ಯಾವಾಗಾಗ್ತಾ ಅವಾಗ ಕೊಡುವಂತಿ. ನಿಮ್ಮೂರ ಸಾವ್ಕಾರನ ಸಾಲಾ ಮುಟ್ಸು... ನನ್ನ ಹೊಲದ ಪಂಪ್ಸೆಟ್ ನೀರು ಇಲ್ಲಿಂದ ನಿನ್ನ ಹೊಲದ್ವರ್ಗೂ ಪೈಪ್‌ಲೈನ್ ಹಾಕ್ಸಿ ಕೊಡ್ತೀನಿ... ನಾಲ್ಕಾಣೆ ಭಾಗ ನನಗ ಕೊಟ್ಟು ಬೆಸ್ಯ ಬೆಳೆ ತೆಗ್ದು ಉಣ್ಣು...' ಎಂದು ಗೆಳೆಯನ ಬದುಕಿಗೆ ಹುರುಪು ತುಂಬುವ ಮಾತಾಡಿದ ಮಂಜಪ್ಪ. ಅಷ್ಟರಲ್ಲಿ ಮತ್ತೊಬ್ಬ ಆಳು ಮಜ್ಜಿಗೆ ತುಂಬಿದ ಗಿಲಾಸು ತಂದು ಮರಿಯಪ್ಪನಿಗೆ ಕೊಟ್ಟ. 'ಬರ್ತೀನಿ ತಡಿ' ಎಂದು ಮಂಜಪ್ಪ ಮನೆಯ ಒಳನಡೆದ. ಮರಿಯಪ್ಪ ಮೆಲ್ಲನೆ ಮಜ್ಜಿಗೆ ಹೀರತೊಡಗಿದ.

ಕೈಯಲ್ಲಿ ಬ್ಯಾಗು ಹಿಡಿದು ಹೊರಬಂದ ಮಂಜಪ್ಪ ಹೊರಸಿಗೆ ಮತ್ತೆ ಕುಳಿತುಕೊಂಡು ಬ್ಯಾಗಿನಿಂದ ರೊಕ್ಕದ ಕಂತು ತೆಗೆದು ಎಣಿಸಿ ಮರಿಯಪ್ಪನ ಕೈಗಿಟ್ಟು, 'ಇನ್ನ್ ನಿಂಗಾ ಯಾವಾನೂ ಹರ್ಕತ್ ಮಾಡಂಗಿಲ್ಲ... ನಿನ್ ಪಾಡಿಗೆ ನೀನು ಹೊಲದಾಗ ದುಡ್ದು ಉಣ್ಣು. ನಾಳೆನಾ ಪೈಪ್‌ಲೈನ್ ಕೆಲ್ಸಾ ಸುರು ಮಾಡಸ್ತೀನಿ. ನೀರಾಸಿ ಹೊಲ ತೊಯ್ಸಿ, ವಾರದಾಗ ಬಿತ್ತಿ, ನೀರು ಕಟ್ಟ್ಯಂತ ನಡಿ. ಮುಂದ ನೋಡು...' ಎಂದು ಬರಡು ಭೂಮಿಯಂತಾಗಿದ್ದ ಗೆಳೆಯನ ಎದೆಯನ್ನು ತಂಪು ಮಳೆಯಂತಾ ಮಾತುಗಳಿಂದ ಅರಳಿಸಿದ. ಮಂಜಪ್ಪ ಕೈಗಿಟ್ಟ ರೊಕ್ಕ ತೆಗೆದುಕೊಂಡು, 'ನಿನ್ನ ರಿಣ ಯಾಂಗ ತೀರಿಸ್ಲೊ...' ಎಂದು ಕೈಮುಗಿದು ಊರ ಕಡೆಯ ದಾರಿ ಹಿಡಿದ ಮರಿಯಪ್ಪ.

ಮರಿಯಪ್ಪ ಮನೆಗೆ ಬಂದಾಗ ಮಧ್ಯಾಹ್ನದ ಹೊತ್ತಾಗಿತ್ತು. ಕೈಕಾಲು ತೊಳೆದುಕೊಂಡು ಒಳಬಂದು ಪಡಸಾಲೆಗೆ ಉಸ್ಸೆಂದು ಕುಳಿತು ಮಗ ಕಲ್ಲನನ್ನು ಕೂಗಿದ. 'ಅವನು ಆಟ್ದಾಗ ಮುಣುಗ್ಯಾನ' ಎಂದು ಪಕ್ಕದ ಗಂಗಮ್ಮರ ಮನೆಗೆ ಹೋಗಿ ಮಜ್ಜಿಗೆ ಕೇಳಿ ತಂದು, ಒಳಗ್ಹೋಗಿ ತಾಟಿಗೆ ಅನ್ನ ಇಟ್ಟುಕೊಂಡು, ಮಜ್ಜಿಗೆ ಹಾಕಿ ಗಂಡನಿಗೆ ಊಟಕ್ಕಿಟ್ಟುಕೊಟ್ಟಳು. ಊಟ ಮಾಡುತ್ತಾ ಗೆಳೆಯನ ಬಗ್ಗೆ ಹೇಳುತ್ತಾ, ತಮ್ಮಿಬ್ಬರ ಗೆಳೆತನದ ಬಗ್ಗೆ ಹೆಮ್ಮೆಯ ಮಾತು ಪೋಣಿಸುತ್ತಾ ಮಜ್ಜಿಗೆ ಅನ್ನ ಉಂಡು, ಹೊಟ್ಟೆ ತಂಪಾಗಿಸಿಕೊಂಡು, ಖಾಲಿ ತಾಟು ಮಾಡಿ ಕೈತೊಳೆದು ಮೇಲೆದ್ದ. ಹೆಂಡತಿಯ ಕೈಗೆ ಐನೂರರ ನೋಟು ಇಟ್ಟು, 'ಮನ್ಯಾಗ ಏನಿಲ್ಲ ಸೆಂತಿ, ತಂಗಂಡ್ ಬಾ. ನಾನ್ ಔಟಪ್ಪ ಸಾಹುಕಾರ್ ಮನಿಕಡೆ ಹೋಗಿ ಬರ್ತೀನಿ' ಎಂದು ಹೊರಗಡೆ ಬಂದು ತನ್ನ ಚಪ್ಪಲಿಗಳನ್ನೇ ದಿಟ್ಟಿಸಿದ. ಚಪ್ಪಲಿ ಮೆಟ್ಟಿಕೊಂಡು

